**O.S. 433-24 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 21.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ R G K, ವಕೀಲರಿಂದಃ**

3. ನನ್ನ ಮೇಲೆ 1 ನೇ ಪ್ರತಿವಾದಿ ಕೌಟುಂಬಿಕ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನೆ ಕೋರಿ ಪ್ರಕರಣ ದಾಖಲ್ ಮಾಡಿದ್ದಾರೆ ಅಂದರೆ ಸರಿ. ನಾನು ಸದರಿ ಪ್ರಕರಣ ದಾಖಲ್ ಮಾಡುವದಕ್ಕಿಂತ ಮುಂಚೆ ಡಿ ವಿ ಕಾಯ್ದೆ ಅಡಿಯಲ್ಲಿ ಕುಂದಗೋಳ ನ್ಯಾಯಾಲಯದಲ್ಲಿ ಒಂದು ಪ್ರಕರಣ ದಾಖಲ್ ಮಾಡಿದ್ದೇನೆ. ನಂತರ ಈ ಪಾಲು ವಿಭಾಗ ದಾವೆ ಸಲ್ಲಿಸಿದ್ದೇನೆ. ಮೂಲಗಿ ಕುಟುಂಬದ ಮೂಲ ಪುರುಷನ ಬಗ್ಗೆ ತಿಳಿದುಕೊಂಡಿಲ್ಲ. ಮೂಲಗಿ ಕುಟುಂಬದ ಮೂಲ ಪುರುಷ ಶಿವಪ್ಪ ಅಂದರೆ ಸರಿ. ಅವರಿಗೆ 5 ಜನ ಮಕ್ಕಳು ಅಂದರೆ ಗೊತ್ತಿಲ್ಲ. ಶಿವಪ್ಪನಿಗೆ 1) ಭರಮಪ್ಪ 2) ರಾಮಪ್ಪ 3) ಬಸವಣ್ಣೆಪ್ಪ 4) ಚನ್ನಮ್ಮ ಹಾಗೂ 5) ಸೋಮಮ್ಮ ಮಕ್ಕಳು ಅಂದರೆ ಸರಿ. ಚನ್ನಮ್ಮ ಹಾಗೂ ಸೋಮಮ್ಮ ರವರಿಗೆ ಗಂಡು ಮಕ್ಕಳಿದ್ದಾರೆ ಅಂದರೆ ಗೊತ್ತಿಲ್ಲ, ಭರಮಪ್ಪ ಮರಣ ಹೊಂದಿದ್ದಾನೆ. ಭರಮಪ್ಪನಿಗೆ ಮದುವೆಯಾಗಿಲ್ಲ ಹಾಗೂ ಮಕ್ಕಳಿಲ್ಲ. ರಾಮಪ್ಪ ಹಾಗೂ ಬಸವಣ್ಣೆಪ್ಪ ರವರಿಗೆ 1992 ರಲ್ಲಿ ಅವರ ಆಸ್ತಿಗಳನ್ನು ಹಂಚಿಕೆ ಮಾಡಿಕೊಂಡಿದ್ದಾರೆ ಅಂದರೆ ಸರಿ. ರಾಮಪ್ಪ ಮರಣ ಹೊಂದಿದ ನಂತರ ರಾಮಪ್ಪ ರವರ ವಾರಸುದಾರರು ಹಾಗೂ ಬಸವಣ್ಣೆಪ್ಪನ ವಾರಸುದಾರರು ಬೇರೆ ಬೇರೆ ಅವರವರ ಆಸ್ತಿಗಳನ್ನು ಸಾಗುವಳಿ ಮಾಡುತ್ತಾರೆ ಅಂದರೆ ಕೂಡಿ ಮಾಡುತ್ತಾರೆಂದು ಹೇಳುತ್ತಾರೆ. ಬಸವಣ್ಣೆಪ್ಪನ ಪಾಲಿಗೆ ಬಂದ ಆಸ್ತಿಗಳನ್ನು ಮಾತ್ರ ಈ ದಾವೆಯಲ್ಲಿ ಸೇರಿಸಿದ್ದೇವೆ ಅಂದರೆ ಸರಿ. ರಾಮಪ್ಪನ ಪಾಲಿಗೆ ಬಂದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿ. ದಾವಾ ಆಸ್ತಿಗಳ ಉತಾರವನ್ನು ನೋಡಿದ್ದೇನೆ. ದಾಖಲೆಗಳಲ್ಲಿ ರಾಮಪ್ಪನಿಗೆ ಬಂದ ಆಸ್ತಿಗಳಲ್ಲಿ ರಾಮಪ್ಪ ರವರ ವಾರಸುದಾರರ ಹೆಸರು ಇವೆ. ಬಸವಣ್ಣೆಪ್ಪನ ಪಾಲಿಗೆ ಬಂದ ಆಸ್ತಿಗಳಲ್ಲಿ ಬಸವಣ್ಣೆಪ್ಪ ರವರ ವಾರಸುದಾರರ ಹೆಸರು ಇವೆ. ರಾಮಪ್ಪ ಹಾಗೂ ಬಸವಣ್ಣ ರವರು 1992 ರಿಂದ ಅವರವರ ಆಸ್ತಿಗಳನ್ನು ಬೇರೆ ಬೇರೆಯಾಗಿ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ ಅಂದರೆ ಗೊತ್ತಿಲ್ಲ.

| 4. ಬಸವಣ್ಣಪ್ಪನಿಗೆ 4 ಜನ ಮಕ್ಕಳೆಂದರೆ ಸರಿ. 1) ರೇವಣ್ಣಸಿದ್ದಪ್ಪ 2) ಹನಮಪ್ಪ 3) ವೆಂಕಪ್ಪ ಹಾಗೂ 4) ಶಾಂತವ್ವ ಅಂದರೆ ಸರಿ. ಶಾಂತವ್ವಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ. ಶಾಂತವ್ವ ಜೀವಂತ ಇದ್ದಾಳೆ.

**O.S. 433-24** **PW : 1**

5. ದಾವಾ ಆಸ್ತಿ ಕ್ರಮಸಂಖ್ಯೆ 6 ಹಾಗೂ 7 ರ ನಮ್ಮ ಕುಟುಂಬಕ್ಕೆ ಸೇರಿವೆ ಅಂತಾ ತೋರಿಸಲು ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿ ಕ್ರಮಸಂಖ್ಯೆ 6 ಹಾಗೂ 7 ನಮ್ಮ ಘರಾಣೆಕ್ಕೆ ಸಂಬಂಧಪಟ್ಟಿವೆ ಅಂತಾ ದಾಖಲೆಗಳನ್ನು ನೋಡಿದ್ದೇನೆ. ದಾವಾ ಆಸ್ತಿ ಕ್ರಮಸಂಖ್ಯೆ 6 ಹಾಗೂ 7 ರಲ್ಲಿ ಮನೆಗಳು ಆಗಿವೆ ಅಂದರೆ ಸರಿ. ಸಾಕ್ಷಿ ಸ್ವತಃ ಹೇಳುತ್ತಾರೆ, ತಾತ್ಕಾಲಿಕವಾಗಿ ಇರಲಿ ಎಂದು ಅಂಗಡಿ ಕಟ್ಟಿಕೊಳ್ಳಲು ಕೊಟ್ಟಿದ್ದಾರೆ. ಎಷ್ಟು ವರ್ಷಗಳಿಂದ ಕಟ್ಟಿದ್ದಾರೆ ಅಂದರೆ ಗೊತ್ತಿಲ್ಲ. ಎರಡು ದಾವಾ ಆಸ್ತಿಗಳಲ್ಲಿ ಕಟ್ಟಿದ ಮನೆಗಳು ಸುಮಾರು 30- 35 ವರ್ಷಗಳ ಮನೆಗಳು ಅಂದರೆ ಗೊತ್ತಿಲ್ಲ. ಸದರಿ ಮನೆಗಳಲ್ಲಿ ಶೆರೆವಾಡ ಗ್ರಾಮದ ಮೂಲಗಿ ಕುಟುಂಬದವರನ್ನು ಹೊರತುಪಡಿಸಿ, ಬೇರೆಯವರು ಇದ್ದಾರೆ ಅಂದರೆ ಇರಬಹುದು. ಈ ಎರಡು ಆಸ್ತಿಗಳು ಯಾರವು ಹಾಗೂ ಯಾರು ಇರುತ್ತಾರೆ ಅಂತಾ ನಾನು ತಿಳಿದುಕೊಂಡಿಲ್ಲ.

6. ಬ್ಲಾಕ್ ನಂಃ 174/1, 2 ಎಕರೆ 15 ಗುಂಟೆ 25 ಆಣೆ ಬಿನ್ ಶೇತ್ಕಿ ಆಗಿದೆ. ಇದರಲ್ಲಿ ಬೇರೆಬೇರೆಯವರಿಗೆ ಆಸ್ತಿಗಳನ್ನು ಖರೀದಿ ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ಇದರಲ್ಲಿಯೂ ಸಹ ಮನೆಗಳು ಆಗಿವೆ ಅಂದರೆ ಸರಿಯಲ್ಲ. ದಾವಾ ಕ್ರಮ ಸಂಖ್ಯೆ 5 ರಿಂದ 7 ನಮ್ಮ ಕುಟುಂಬದ ತಾಬಾದಲ್ಲಿ ಇಲ್ಲ ಅಂದರೆ ಸರಿಯಲ್ಲ. ಈ ಆಸ್ತಿಗಳು ನಮ್ಮ ಕುಟುಂಬದ ತಾಬಾಬದಲ್ಲಿ ಇಲ್ಲದಿದ್ದರೂ ಸಹ ಅದರಲ್ಲಿರುವವರನ್ನು ಪಕ್ಷಗಾರರನ್ನಾಗಿ ಮಾಡದೇ ಸಲ್ಲಿಸಿದ ದಾವೆ ಊರ್ಜಿತವಲ್ಲ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಗಂಡ. ಹನಮಂತಪ್ಪ ನನ್ನ ಗಂಡನ ಸಹೋದರ ಮರಣ ಹೊಂದಿದ್ದಾರೆ. ರೇವಣಸಿದ್ದಪ್ಪ ಎಲ್ಲರಗಿಂತ ದೊಡ್ಡ ಮಗ. 1 ನೇ ಪ್ರತಿವಾದಿ ಬಿ ಎ ಎಂ ಎಸ್ ವ್ಯಾಸಂಗ ಮಾಡಿದ್ದಾರೆ, ಅವರ ಶಿಕ್ಷಣದ ಖರ್ಚನ್ನು ರೇವಣಸಿದ್ದಪ್ಪ ಹಾಗೂ ಹನಮಂತಪ್ಪ ನೋಡಿಕೊಂಡಿದ್ದಾರೆ ಅಂದರೆ ಗೊತ್ತಿಲ್ಲ.

7. ಮದುವೆಯಾದ ನಂತರ ನನ್ನ ಮೇಲೆ ಆರೋಪ ಬಂದಿದ್ದರಿಂದ ನನ್ನ ಗಂಡ ಹಾಗೂ ಆತನ ಸಹೋದರರು ಬೇರೆಯಾದರು ಅಂದರೆ ಸರಿಯಲ್ಲ. ಈಗ ಸಾಕ್ಷಿಗೆ ದಿಃ 28.12.2022 ರ ವಾಟ್ನಿ ಪತ್ರವನ್ನು ತೋರಿಸಲಾಗಿ ಸಾಕ್ಷಿಯೂ ಅದನ್ನು ವಾಟ್ನಿಯಾಗಿದೆ, ಮಹಿಳಾ ಆಯೋಗಕ್ಕೆ ದೂರು ಕೊಟ್ಟ ನಂತರ ಸುಳ್ಳು ವಾಟ್ನಿ ಪತ್ರ ಮಾಡಿಕೊಂಡಿದ್ದಾರೆಂದು ಹೇಳಿದ್ದರಿಂದ ಸದರಿ ವಾಟ್ನಿ ಪತ್ರವನ್ನು ನಿಡಿ.1 ಎಂದು ಗುರುತಿಸಲಾಯಿತು. ರೇವಣಸಿದ್ದಪ್ಪ ಹಾಗೂ ಹನಮಂತಪ್ಪ ರವರು ನನ್ನ ಗಂಡನಿಗೆ ಶಿಕ್ಷಣ ಕೊಡಿಸಿದ್ದರಿಂದ ಅವರಿಗೆ ಜಾಸ್ತಿ ಆಸ್ತಿ ಹೋಗಿದೆ ಅಂದರೆ ಸರಿಯಲ್ಲ. ನನ್ನ ಗಂಡ ಹಾಗೂ ಆತನ ಸಹೋದರರು ಮಾಡಿಕೊಂಡ ವಾಟ್ನಿ ಪತ್ರವನ್ನು ಪ್ರಶ್ನೆ ಮಾಡಲು ನನಗಾಗಲಿ ಹಾಗೂ ನನ್ನ ಮಗಳಿಗಾಗಲಿ ಅಧಿಕಾರವಿಲ್ಲ ಅಂದರೆ ಸರಿಯಲ್ಲ.

**O.S. 433-24** **PW : 1**

ನನ್ನ ಗಂಡನ ಸಹೋದರರು ತಮ್ಮ ತಂದೆ ಪಾಲಿಗೆ ಬಂದ ಆಸ್ತಿಗಳನ್ನು ವಾಟ್ನಿ ಮಾಡಿಕೊಂಡಿದ್ದಾರೆ ಅಂದರೆ ಸರಿ. ಸದರಿ ಆಸ್ತಿಗಳು ಬಸವಣ್ಣೆಪ್ಪ ಹಾಗೂ ರಾಮಪ್ಪರವರಿಗೆ ವಾಟ್ನಿ ಯಲ್ಲಿ ಬಂದಿದ್ದರಿಂದ ಸದರಿ ಆಸ್ತಿಗಳು ಅವರ ಸ್ವಯಾರ್ಜಿತ ಆಸ್ತಿಗಳು ಅಂದರೆ ಸರಿಯಲ್ಲ. ರಾಮಪ್ಪ ಹಾಗೂ ಬಸವಣ್ಣೆಪ್ಪ ರವರಿಗೆ ಆದ ವಾಟ್ನಿಯನ್ನು ನಾನು ಇಲ್ಲಿಯವರೆಗೂ ಪ್ರಶ್ನೆ ಮಾಡಿಲ್ಲ ಅಂದರೆ ಸರಿ.

**ಮುಂದಿನ ಪಾಟೀ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.